**Code No. 18 X**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ – ಪ್ರೌಢ ದರ್ಜೆ – ಪ್ರಥಮ ಪತ್ರಿಕೆ

# (ವೇಗ ಮತ್ತು ಉಕ್ತಲೇಖನ)

ಜನವರಿ / ಫೆಬ್ರವರಿ, 2020

ವೇಳೆ { ಉಕ್ತಲೇಖನ : 10 ನಿಮಿಷಗಳು
ವಿಸ್ತರಣೆ : 2 ಗಂಟೆಗಳು

ಪರಮಾವಧಿ ಅಂಕಗಳು : 100

***ಓದುಗರಿಗೆ ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು ಒಂದು ನಿಮಿಷಕ್ಕೆ ಇನ್ನೂರ ಅರವತ್ತು (260) ಅಕ್ಷರಗಳ ವೇಗದಲ್ಲಿ ಪ್ರಶ್ನೆ ಪತ್ರಿಕೆಯಲ್ಲಿ ಸೂಚಿಸಿದ ರೀತಿಯಲ್ಲೇ ಓದತಕ್ಕದ್ದು.

2) ಉಕ್ತಲೇಖನ ಮುಗಿದ ನಂತರ ಅಭ್ಯರ್ಥಿಗಳಿಗೆ ಶೀಘ್ರಲಿಪಿ ಟಿಪ್ಪಣಿಯನ್ನು ನಿಗದಿಪಡಿಸಿದ ಅವಧಿಯೊಳಗೆ ಲಿಪ್ಯಂತರ ಮಾಡಲು ಸೂಚಿಸತಕ್ಕದ್ದು.

---

ಸನ್ಮಾನ್ಯ ಸಭಾಧ್ಯಕ್ಷರೇ,

ನಾನು ಎರಡು ಸಾವಿರದ ಹತ್ತೊಂಬತ್ತು
ಇಪ್ಪತ್ತನೇ ಸಾಲಿನ ಆಯವ್ಯಯ ಪತ್ರವನ್ನು
ಸದನದ ಮುಂದೆ ಮಂಡಿಸುತ್ತಿದ್ದೇನೆ. ನಮ್ಮ
ಮೈತ್ರಿ ಸರ್ಕಾರ ಅಸ್ತಿತ್ವಕ್ಕೆ ಬಂದು ಎಂಟು
1/4 ತಿಂಗ/ಳಾಯಿತು, ಈ ಬಂಧ ಇಂದು
ಕಳಚುವುದು, ನಾಳೆ ಕಳಚುವುದು ಎಂಬ
ಪುಕಾರುಗಳನ್ನು ವ್ಯವಸ್ಥಿತವಾಗಿ ಹಬ್ಬಿಸುವ
ನಿರಂತರ ಪ್ರಯತ್ನಗಳೆಲ್ಲವೂ ಅಲ್ಲಲ್ಲಿಯೇ
1/2 ನೆಲಕಚ್ಚಿದರೆ, ಅಭಿವೃದ್ಧಿಯ ಎ/ಳೆಯ ಈ
ಬಂಧ ಬಲಗೊಳ್ಳುತ್ತಾ ಸಾಗಿದೆ. ರಾಷ್ಟ್ರ
ರಾಜಕಾರಣದಲ್ಲಿ ಮೈತ್ರಿ ಪರ್ವ ಹೊಸದಲ್ಲ.
ಹಲವು ವಿನೂತನ ಕಾರ್ಯಕ್ರಮಗಳನ್ನು ನೀಡಿದ
ಹೆಗ್ಗಳಿಕೆಯೂ ಈ ಮೈತ್ರಿ ಸರ್ಕಾರಗಳಿಗಿವೆ. ಈ
3/4 ವಾಸ್ತ/ವವನ್ನು ಒಪ್ಪಿಕೊಳ್ಳುವ ಮನಸ್ಥಿತಿಯ
ಅಗತ್ಯ ಇಂದು ಇದೆ. ನಮ್ಮ ಮೈತ್ರಿ ಸರ್ಕಾರವು
ಪರಸ್ಪರ ಸಮನ್ವಯ, ಸಹಕಾರದೊಂದಿಗೆ
ತಮ್ಮ ಅಭಿವೃದ್ಧಿಯ ಕಾರ್ಯಸೂಚಿಯನ್ನು
ಜಾರಿಗೊಳಿಸುತ್ತ ಮುನ್ನಡೆXದಿದೆ. 1

ಮಹಾತ್ಮ ಗಾಂಧಿಯವರ ನೂರ ಐವತ್ತನೇ
ಜನ್ಮ ವರ್ಷಾಚರಣೆಯ ಸುಸಂದರ್ಭದಲ್ಲಿ ನಮ್ಮ
ಸರ್ಕಾರದ ಯೋಜನೆಗಳ ಸ್ವರೂಪ ಈ ಸೂತ್ರದ
ಎಳೆಯಲ್ಲಿದೆ. ಅಭಿವೃದ್ಧಿಯ ಮುನ್ನೋಟವೂ
ಈ ನುಡಿ/ಗಳಿಂದ ಪ್ರೇರಿತವಾಗಿದೆ. ನಾಡಿನ 1/4
ಪ್ರತಿಯೊಬ್ಬರೂ ಸ್ವಾಭಿಮಾನದಿಂದ ಬದುಕುವ
ವಾತಾವರಣವನ್ನು ಕಲ್ಪಿಸುವುದು ನಮ್ಮ
ಸರ್ಕಾರದ ಆಶಯ. ಈ ಆಶಯವನ್ನು
ಸಾಕಾರಗೊಳಿಸುವ ನಿಟ್ಟಿನಲ್ಲಿ/ ನಮ್ಮ 1/2
ಪ್ರಾಮಾಣಿಕ ಪ್ರಯತ್ನ ಸಾಗಿದೆ. ನಮ್ಮ ಸರ್ಕಾರ
ಅಸ್ತಿತ್ವಕ್ಕೆ ಬಂದು ಕೇವಲ ಇನ್ನೂರ ಅರವತ್ತೆರಡು

ದಿನಗಳಾಗಿವೆ. ಸರ್ಕಾರದ ಸಾಧನೆಗಳನ್ನು
$\frac{3}{4}$ ಅಳೆಯಲು ಇದು ಅತ್ಯಲ್ಪ ಅವಧಿ. ಆದ/ರೆ
ಈ ಅವಧಿಯಲ್ಲಿ ನಮ್ಮ ಗುರಿ, ನಮ್ಮ
ಹಾದಿ ಸುಸ್ಪಷ್ಟವಾಗಿದೆ. ನಮ್ಮ ಸರ್ಕಾರ
ಬಡವರಿಗೆ ಆಸರೆಯಾಗುವುದು, ನೇಗಿಲ
ಯೋಗಿಯ ಹೆಗಲಿಗೆ ಹೆಗಲು ಕೊಡುವುದು,
2 ನಿರುದ್ಯೋಗಿಗಳಿಗೆ ಅವಕಾಶXದ ಬಾಗಿಲು
ತೆರೆಯುವುದು, ದುರ್ಬಲರಿಗೆ ಭದ್ರತೆಯ
ಭಾವ ಒದಗಿಸಿ, ರಕ್ಷಣೆ ನೀಡುವುದು ನಮ್ಮ
ಕರ್ತವ್ಯವೆಂಬ ಭಾವನೆ–ಇದೇ ನಮ್ಮ
ಯೋಜನೆಗಳ ಜೀವಾಳ. ಕೃಷಿ ವಲಯದ
$\frac{1}{4}$ ಉನ್ನತಿ, ಉದ್ಯೋಗ/ ಸೃಷ್ಟಿ, ನಗರಾಭಿವೃದ್ಧಿ,
ಮೂಲಸೌಕರ್ಯ, ಗ್ರಾಮೀಣಾಭಿವೃದ್ಧಿ,
ಶಿಕ್ಷಣ, ಆರೋಗ್ಯ, ಸಾಮಾಜಿಕ ಭದ್ರತೆ
ಮೊದಲಾದವುಗಳು ನಮ್ಮ ಆದ್ಯತಾ
ವಲಯಗಳು. ಅಲ್ಲದೆ ನಮ್ಮ ಅಭಿವೃದ್ಧಿಯ
$\frac{1}{2}$ ಪಥವನ್ನೂ ನಿಖ/ರವಾಗಿ ಗುರುತಿಸಿ, ಈ
ವಲಯದಲ್ಲಿ ದೂರದೃಷ್ಟಿಯ ಕಾರ್ಯಕ್ರಮ
ಗಳನ್ನು ಈಗಾಗಲೇ ರೂಪಿಸಿದ್ದೇವೆ.

ನಮ್ಮ ರಾಜ್ಯವು ಎರಡು ಸಾವಿರದ
ಒಂದರಿಂದ ಈವರೆಗೆ ಅಂದರೆ ಕಳೆದ
$\frac{3}{4}$ ಹದಿನೆಂಟು ವ/ರ್ಷಗಳಲ್ಲಿ ಹದಿನಾಲ್ಕು
ವರ್ಷ ಬರಗಾಲಕ್ಕೆ ತುತ್ತಾಗಿದೆ. ಇದರಿಂದಾಗಿ
ಸತತ ನಷ್ಟ ಅನುಭವಿಸಿದ ರೈತ ಸೋತು
ಸುಣ್ಣವಾಗಿದ್ದಾನೆ. ಈ ವರ್ಷ ಕೊಡಗು
3 ಸೇರಿದಂತೆ ಮಲೆನಾಡು–ಕರವಳಿ ಭಾಗXದಲ್ಲಿ
ಅತಿವೃಷ್ಟಿಯಿಂದ ತೀವ್ರ ಹಾನಿ ಸಂಭವಿಸಿದರೆ,
ರಾಜ್ಯದ ನೂರ ಐವತ್ತಾರು ತಾಲ್ಲೂಕುಗಳು
ಬರದಿಂದ ತತ್ತರಿಸಿವೆ. ಆದರೆ ಪ್ರಕೃತಿ
ವಿಕೋಪಕ್ಕೆ ಸ್ಪಂದಿಸುವ ಜೊತೆಗೆ ರೈತರ
ಸಂಕಷ್ಟ/ಗಳನ್ನು ನಿವಾರಿಸುವ ಹಾಗೂ ಜನರ $\frac{1}{4}$
ಆಶೋತ್ತರಗಳನ್ನು ಈಡೇರಿಸುವ ನಿಟ್ಟಿನಲ್ಲಿ
ನಾವು ದೃಢ ಹೆಜ್ಜೆಗಳನ್ನಿಟ್ಟಿದ್ದೇವೆ. ಕೊಡಗಿನಲ್ಲಿ
ಮನೆ ಕಳೆದುಕೊಂಡ ನಿರಾಶ್ರಿತರಿಗೆ ಸರ್ಕಾರದ
ವತಿಯಿಂ/ದಲೇ ಮನೆ ನಿರ್ಮಿಸಿಕೊಡುವ $\frac{1}{2}$
ಕಾರ್ಯ ಭರದಿಂದ ಸಾಗಿದೆ. ಕೊಡಗಿನ
ಸಂಕಷ್ಟದಲ್ಲಿ ಮಿಡಿದು ಸ್ಪಂದಿಸಿದ ವಿವಿಧ
ರಕ್ಷಣಾ ಪಡೆಗಳ ಸಿಬ್ಬಂದಿ, ಸ್ವಯಂಸೇವಕರು,
ಸಾರ್ವಜನಿಕರ ಮಾನವೀಯ ಕಾ/ಳಜಿಯನ್ನು $\frac{3}{4}$
ನಾನು ಮನಃಪೂರ್ವಕವಾಗಿ ಸ್ಮರಿಸುತ್ತೇನೆ.

ಬರ ಪರಿಹಾರದ ನೆರವಿಗಾಗಿ ಕೇಂದ್ರಕ್ಕೆ
ಮನವಿ ಸಲ್ಲಿಸಿದ್ದರೂ, ಕೇವಲ ಅಲ್ಪಮಟ್ಟದ
ಪರಿಹಾರ ಮಂಜೂರಾಗಿರುತ್ತದೆ. ಆದಾಗ್ಯೂ
ಬರXಪರಿಸ್ಥಿತಿಯನ್ನು ಎದುರಿಸಲು ಸಚಿವ 4
ಸಂಪುಟ ಉಪ ಸಮಿತಿಗಳನ್ನು
ರಚಿಸಲಾಗಿದ್ದು, ಪರಿಹಾರ ಕಾರ್ಯಗಳನ್ನು
ನಿಯತವಾಗಿ ಪರಿಶೀಲಿಸಲಾಗುತ್ತಿದೆ. ಪರಿಹಾರ
ಕಾರ್ಯಗಳಿಗಾಗಿ ಜಿ/ಲ್ಲಾ ಪಂಚಾಯಿತಿಗಳಿಗೆ $\frac{1}{4}$
ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ
ಅನುದಾನ ಬಿಡುಗಡೆ ಮಾಡಲಾಗಿದ್ದು, ಬರ
ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು
ಜಿಲ್ಲಾಡಳಿತಗಳನ್ನು ಸಜ್ಜುಗೊಳಿಸಿ/ದ್ದೇವೆ. $\frac{1}{2}$

ರೈತರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ
ಕ್ರಮಗಳನ್ನು ಕೈಗೊಳ್ಳುವುದು ನಮ್ಮ ಸರ್ಕಾರದ

ಅತಿ ಆದ್ಯತೆಯ ವಿಷಯವಾಗಿದ್ದು, ರೈತರ
ನೋವಿಗೆ ಮಿಡಿದು, ಅವರ ಹೆಗಲಿಗೆ ಹೆಗಲು
$\frac{3}{4}$ ಕೊ/ಟ್ಟು ಮುನ್ನಡೆಯುವ ಮೂಲಕ ಅವರಲ್ಲಿ
ಆತ್ಮವಿಶ್ವಾಸ ಮೂಡಿಸುವ ಸಂಕಲ್ಪ ತೊಟ್ಟಿದ್ದೇವೆ.
ರೈತರ ಬೆಳೆ ಸಾಲ ಮನ್ನಾ ಯೋಜನೆಯನ್ನು
ಯಶಸ್ವಿಯಾಗಿ, ಅತ್ಯಂತ ಪಾರದರ್ಶಕವಾಗಿ
5 ಜಾರಿಗೊಳಿಸುತ್ತಿದ್ದೇXವೆ. ಆದರೆ ಸಾಲ ಮನ್ನಾ
ಒಂದೇ ಅವರ ಸಮಸ್ಯೆಗಳಿಗೆ ಪರಿಹಾರ ನೀಡಲು
ಸಾಧ್ಯವಿಲ್ಲ ಎಂಬುದರ ಅರಿವು ನಮಗಿದೆ.
ಹಸಿರು ಕ್ರಾಂತಿಯಿಂದ ನಮ್ಮ ದೇಶ ಆಹಾರ
$\frac{1}{4}$ ಉತ್ಪಾದನೆಯಲ್ಲಿ ಸ್ವಾವಲಂಬ/ನೆ ಸಾಧಿಸಿದೆ.

ಇನ್ನು ಕೈಗಾರಿಕೆಗಳ ಬಗ್ಗೆ ಹೇಳುವುದಾದರೆ,
ಭಾರತದ ಕೈಗಾರಿಕೆಗಳ ಪಿತಾಮಹ ಜೆ.ಎನ್.
ಟಾಟಾರವರು ಹೇಳಿರುವಂತೆ ನಮ್ಮ
$\frac{1}{2}$ ಸ್ವಾತಂತ್ರ್ಯ ಉಳಿಸಿಕೊಳ್ಳಲು ಬೇಕಾದ ಆರ್ಥಿಕ/
ಶಕ್ತಿ, ಸ್ವಾವಲಂಬನೆ ಕೈಗಾರಿಕೀಕರಣದಿಂದಲೇ
ಸಾಧ್ಯ. ಕರ್ನಾಟಕ, ಅದರಲ್ಲೂ
ಬೆಂಗಳೂರು ಹೂಡಿಕೆದಾರರ ನೆಚ್ಚಿನ
ತಾಣವಾಗಿ ಗುರುತಿಸಿಕೊಂಡಿದೆ. ಇದನ್ನು
$\frac{3}{4}$ ಬೆಂಗಳೂರಿನಾಚೆಗೆ, ಸಣ್ಣ ನಗ/ರಗಳಿಗೆ
ವಿಸ್ತರಿಸಿ, ಯುವಜನರ ಬದುಕಿಗೆ ಬೆಳಕಾಗುವ
ಉದ್ಯೋಗದ ದೀವಿಗೆ ನೀಡುವ ಮಹಾದಾಸೆ
ನಮ್ಮ ಸರ್ಕಾರದ್ದು.

ಶಿಕ್ಷಣದ ಬಗ್ಗೆ ಹೇಳುವುದಾದರೆ,
6 ಮಹಾನ್ ಮಾನವತಾವಾದಿ ನೆಲ್ಸXನ್
ಮಂಡೇಲಾರವರು ಹೇಳಿರುವಂತೆ "ಶಿಕ್ಷಣ
ಬದುಕನ್ನೇ ಬದಲಿಸುವ ಸಾಮರ್ಥ್ಯವುಳ್ಳ
ಸಾಧನ." ಇತ್ತೀಚೆಗೆ ಲಿಂಗೈಕ್ಯರಾದ ಸಿದ್ಧಗಂಗಾ
ಮಠದ ತ್ರಿವಿಧ ದಾಸೋಹಿ ಶ್ರೀ ಶ್ರೀ ಶ್ರೀ
ಶಿವಕುಮಾರ ಮಹಾಸ್ವಾ/ಮೀಜಿಯವರು $\frac{1}{4}$
ಬಡವ, ಬಲ್ಲಿದರೆನ್ನದೆ, ಜಾತಿ ಮತ
ಭೇದವಿಲ್ಲದೆ ಲಕ್ಷಾಂತರ ಮಕ್ಕಳಿಗೆ ಅಕ್ಷರ,
ಆಶ್ರಯ, ಅನ್ನ ದಾಸೋಹ ಮಾಡಿ ಎಲ್ಲರಿಗೂ
ಮಾದರಿಯಾಗಿದ್ದಾರೆ. ಇದೇ ರೀತಿಯಲ್ಲಿ
ರಾಜ್ಯದಲ್ಲಿ/ ಹಲವಾರು ಧಾರ್ಮಿಕ ಸಂಸ್ಥೆಗಳು $\frac{1}{2}$
ಈ ರೀತಿ ಬಡ ಮಕ್ಕಳ ಶಿಕ್ಷಣಕ್ಕೆ ಕೊಡುಗೆ
ನೀಡುತ್ತಿರುವುದನ್ನು ನಾನು ಅತ್ಯಂತ ಗೌರವ,
ಅಭಿಮಾನದಿಂದ ಸ್ಮರಿಸಬಯಸುತ್ತೇನೆ.
ಎಲ್ಲರಿಗೂ ಗುಣಮಟ್ಟದ ಶಿ/ಕ್ಷಣ ನೀಡುವ $\frac{3}{4}$
ಸಮಾನ ಅವಕಾಶಗಳನ್ನು ಒದಗಿಸಬೇಕೆಂಬ
ಆಶಯ ನಮ್ಮ ಸರ್ಕಾರದ್ದು. ಈ ಹಿನ್ನೆಲೆಯಲ್ಲಿ
ಸರ್ಕಾರಿ ಶಾಲಾ ಕಾಲೇಜುಗಳ
ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ
ನೀಡಲಾಗಿದೆ.X 7

ಮಾನ್ಯರೆ,

ನಿಮಗೆ ತಿಳಿದಿರುವಂತೆ ನಮ್ಮ ಅಂಗಡಿಯು
ಹಾಸನ ನಗರದಲ್ಲಿ ಒಂದು ಸುಪ್ರಸಿದ್ಧ ಬಟ್ಟೆ
ಮಳಿಗೆಯಾಗಿದ್ದು ಹಲವಾರು ಶಾಖೆಗಳನ್ನು
ಹೊಂದಿದೆ. ತಮಗೆ ಈಗಾಗಲೇ ತಿಳಿದಿರುವಂತೆ/ $\frac{1}{4}$
ನಮ್ಮ ಮಳಿಗೆಯಲ್ಲಿ ಮೈಸೂರು ರೇಷ್ಮೆ,
ಬನಾರಸ್ ರೇಷ್ಮೆ ಮತ್ತು ಕಂಚಿ ರೇಷ್ಮೆ
ಮುಂತಾದ ಸೀರೆಗಳ ದಾಸ್ತಾನು ಇದೆ.
ನಮ್ಮಲ್ಲಿ ಲಭ್ಯವಿರುವ ಸೀರೆಗಳು ನಮ್ಮ
ಕಾರ್ಖಾನೆಯಿಂದಲೇ ತಯಾರಿಸಲ್ಪಡುತ್ತದೆ.

$\frac{1}{2}$ ಆ/ಲ್ಲದೆ, ನಮ್ಮಲ್ಲಿ ತಯಾರಾಗುವ ಸೀರೆಗಳು
ಉತ್ತಮ ಗುಣಮಟ್ಟವನ್ನು ಹೊಂದಿದ್ದು ಹೊರ
ರಾಜ್ಯಗಳಲ್ಲೂ ಮತ್ತು ವಿದೇಶಗಳಲ್ಲೂ ಬಹಳ
ಬೇಡಿಕೆಯಿದ್ದು ವಿದೇಶಗಳಿಗೂ ಸರಬರಾಜು
$\frac{3}{4}$ ಮಾಡುತ್ತಿದ್ದೇವೆ./ ನಮ್ಮ ಮಳಿಗೆಯು
ಹಾಸನದಲ್ಲಿ ಮಾತ್ರವಲ್ಲದೆ, ರಾಜ್ಯದ ಇತರ
ಜಿಲ್ಲಾ ಕೇಂದ್ರಗಳಲ್ಲೂ ಮತ್ತು ಹೊರ
ರಾಜ್ಯಗಳಲ್ಲೂ ಶಾಖೆಗಳಿರುತ್ತವೆ. ನಮ್ಮ
ಅಂಗಡಿಯು ವಿಶೇಷವಾಗಿ ಮಹಿಳೆಯರ ಮತ್ತು
8 ಮಕ್ಕXಳ ಉಡುಪುಗಳಿಗೆ ಪ್ರಸಿದ್ಧಿಯಾಗಿರುತ್ತದೆ.
ನಮ್ಮ ಅಂಗಡಿಯಲ್ಲಿ ರೇಷ್ಮೆ ಸೀರೆಗಳು ಅಲ್ಲದೆ,
ಪುರುಷರ ರೇಮಾಂಡ್ಸ್, ಲೆನಿನ್ ಬಟ್ಟೆಗಳು ಸಹ
ಆಕರ್ಷಕವಾದ ಹಾಗೂ ವಿವಿಧ ಬಣ್ಣಗಳಲ್ಲಿ
$\frac{1}{4}$ ದೊರೆ/ಯಲಿದೆ.

ಇನ್ನು ನಮ್ಮ ಹಾಸನದ ಶಾಖೆಯು
ಪ್ರಾರಂಭವಾಗಿ ಬೆಳಕಿನ ಹಬ್ಬವಾದ ಇದೇ
ದೀಪಾವಳಿ ಹಬ್ಬದಂದು ಐವತ್ತು ವರ್ಷಗಳು
ಪೂರ್ಣಗೊಳ್ಳಲಿದೆ. ಆದುದರಿಂದ ಶಾಖೆಯ
$\frac{1}{2}$ ಸುವರ್ಣ ಮಹೋತ್ಸವ/ ಸಮಾರಂಭವನ್ನು
ಹಮ್ಮಿಕೊಳ್ಳುವ ಉದ್ದೇಶವಿದೆ. ಈ ಸುವರ್ಣ
ಹಬ್ಬದ ಆಚರಣೆಗೆ ನಮ್ಮೆಲ್ಲಾ ಗ್ರಾಹಕರನ್ನು
ಆಹ್ವಾನಿಸಲು ಯೋಜಿಸಿದ್ದೇವೆ. ಈ
ಸಂದರ್ಭದಲ್ಲಿ ಕನ್ನಡನಾಡಿನ ಜನತೆಗಾಗಿ
$\frac{3}{4}$ ಸುವ/ರ್ಣೋತ್ಸವ ಹಾಗೂ ದೀಪಾವಳಿ
ಹಬ್ಬದ ಪ್ರಯುಕ್ತ ಎಲ್ಲಾ ಮಾದರಿಯ
ಸೀರೆಗಳ ಜೊತೆಗೆ ಸುಂದರ ಕಸೂತಿ
ಕೆಲಸವಿರುವ ವಿನೂತನ ರಾಜಸ್ತಾನಿ ಶೈಲಿಯ
ಹೊಸ ಹೊಸ ವಿನ್ಯಾಸಗಳ ಸೀರೆಗಳನ್ನುX 9
ಮತ್ತು ಇತರೆ ಬಟ್ಟೆಗಳನ್ನು ವಿಶೇಷ
ರಿಯಾಯಿತಿ ದರದಲ್ಲಿ ಮಾರಾಟ
ಮಾಡುತ್ತೇವೆ. ಅಲ್ಲದೆ, ಈ ರಿಯಾಯಿತಿ
ದರದ ಮಾರಾಟದಲ್ಲಿ, ಬಹುಮಾನ
ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಪ್ರಥಮ
ಬಹು/ಮಾನವಾಗಿ ಮಾರುತಿ ಸ್ವಿಫ್ಟ್ ಕಾರನ್ನು $\frac{1}{4}$
ನೀಡಲಾಗುತ್ತದೆ. ಪ್ರತಿ ಎರಡು ಸಾವಿರ
ರೂಪಾಯಿಗಳ ಖರೀದಿಗೆ ಒಂದು ಬಹುಮಾನದ
ಕೂಪನ್ ನೀಡಲಾಗುವುದು. ಮಾರಾಟದ
ಕೊನೆಯಲ್ಲಿ ಲಾಟರಿ ಎತ್ತುವ/ ಮೂಲಕ $\frac{1}{2}$
ವಿಜೇತರನ್ನು ಆಯ್ಕೆ ಮಾಡಲಾಗುವುದು. ಈ
ರಿಯಾಯಿತಿ ದರದ ಪ್ರಯೋಜನ ಕೇವಲ
ಒಂದು ತಿಂಗಳು ಮಾತ್ರ ಇರುತ್ತದೆ. ನೀವು ನಮ್ಮ
ಹಳೆಯ ಮತ್ತು ಉತ್ತಮ ಗ್ರಾಹಕರಲ್ಲಿ
ಒಬ್ಬರಾಗಿರುವು/ದರಿಂದ, ಇಂತಹ ಸುವರ್ಣ $\frac{3}{4}$
ಅವಕಾಶವನ್ನು ಸದುಪಯೋಗಪಡಿಸಿಕೊಳ್ಳ
ಬೇಕಾಗಿ ವಿನಂತಿ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸದ,

ಚಂದ್ರಶೇಖರಯ್ಯ
ಪಾಲುದಾರರು
ಚಂದ್ರು ಅಂಡ್ ಸನ್ಸ್ ಪರವಾಗಿ.X 10